**ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ. ಕೆ.ಎ ತಿಪ್ಪೇಸ್ವಾಮಿ ಹಾಗೂ ಶ್ರೀ ಟಿ.ಎ. ಶರವಣ ಇವರು ನಿಯಮ 72ರ ಅಡಿ ಗಮನ ಸೆಳೆಯುವ ಸೂಚನೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರ ಉತ್ತರ.**

**ಪ್ರಶ್ನೆ:-** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ವಸತಿಯುತ ಶಾಲೆ ಇಲ್ಲದ ಪ್ರಯುಕ್ತ ಬೆಂಗಳೂರಿನ ಇಂದಿರಾ ನಗರದಲ್ಲಿ ವಸತಿಯುತ ಶಾಲೆ ಪ್ರಾರಂಭಿಸಲು ದಿ:23.07.2016ರ ಸರ್ಕಾರದ ಆದೇಶದಲ್ಲಿ ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಿ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳಿಗೆ ಪ್ರತ್ಯೇಕ ಆಯವ್ಯಯ ನಿಗಧಿಗೊಳಿಸಿ ಆದೇಶ ಹೊರಡಿಸಲಾಗಿದೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ದಿ:19.05.2020ರ ನಡವಳಿಯಲ್ಲಿ 50 ಗಂಡು ಮಕ್ಕಳು 50 ಹೆಣ್ಣು ಮಕ್ಕಳಿಗೆ ವಸತಿ ಸೌಲಭ್ಯ ಕಲ್ಪಿಸಿ ಆದೇಶಿಸಿದ್ದು, ಮಾನ್ಯ ಇಲಾಖಾ ಸಚಿವರು ವಸತಿ ಶಾಲೆ ಪ್ರಾರಂಭಿಸಲು ಸದನದಲ್ಲಿ ಭರವಸೆ ನೀಡಿದ್ದು, ಭರವಸೆ ಸಂಖ್ಯೆ ಮಮಇ: 172 ಪಿಹೆಚ್‌ಪಿ: 2016 ಮತ್ತು 09 ಅಧಿವೇಶನಗಳಿಂದಲೂ ವಸತಿ ಶಾಲೆ ಪ್ರಾರಂಭಿಸುವುದಾಗಿ ಭರವಸೆ ನೀಡಿರುತ್ತಾರೆ. ಹೆಚ್ಚಿನ ಸಂಖ್ಯೆಯ ಬಡವರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ದಲಿತ ವರ್ಗದ ಕಿವುಡ ಮತ್ತು ಮೂಕ ವಿದ್ಯಾರ್ಥಿಗಳು ವಸತಿ ಸೌಲಭ್ಯ ಪಡೆಯಲು ಹಲವು ಬಾರಿ ಮನವಿ ಮಾಡಿದ್ದರೂ ಸಹ ಅಧಿಕಾರಿಗಳ ಉದಾಸೀನತೆಯಿಂದ ವಸತಿ ಶಾಲೆ ಪ್ರಾರಂಭಿಸಿರುವುದಿಲ್ಲ. ಈ ಬಗ್ಗೆ ಇನ್ನೆಷ್ಟು ದಿನಗಳಲ್ಲಿ ವಸತಿ ಶಾಲೆ ಪ್ರಾರಂಭಿಸಲಾಗುವುದೆಂಬ ಬಗ್ಗೆ ನಿರ್ದಿಷ್ಟ ಸಮಯವನ್ನು ಕೋರಿ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

**ಉತ್ತರ:-** ಸರ್ಕಾರದ ಆದೇಶ ಸಂಖ್ಯೆ: ಮಮಇ 389 ಪಿಹೆಚ್‌ಪಿ 2014, ಬೆಂಗಳೂರು, ದಿನಾಂಕ: 23.07.2016ರನ್ವಯ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರದ ವಶಕ್ಕೆ ಪಡೆದು ಹಾಲಿ ಇರುವ ಸಿಬ್ಬಂದಿಗಳ ಸಮೇತ, ಚರ, ಸ್ಥಿರ ಆಸ್ತಿಗಳನ್ನೊಳಗೊಂಡಂತೆ ಸರ್ಕಾರಿ ವಸತಿಯುತ ಶಾಲೆಯನ್ನಾಗಿ ನಿಯಮಾನುಸಾರ ಮಾರ್ಪಡಿಸಲು ಆವರ್ತಕ ವೆಚ್ಚ ಹಾಗೂ ಅನಾವರ್ತಕ ವೆಚ್ಚ ಸೇರಿ ಒಟ್ಟು ರೂ.136.35 ಲಕ್ಷಗಳ ಮಂಜೂರಾತಿಯನ್ನು ನೀಡಿ ಆದೇಶಿಸಲಾಗಿರುತ್ತದೆ. ಆದರೆ "ವಸತಿಯುತ ಶಾಲೆ"ಯನ್ನಾಗಿ ಪರಿವರ್ತಿಸಲು ಅಗತ್ಯವಿರುವ ಹೆಚ್ಚುವರಿ ಹುದ್ದೆಗಳ ಸೃಜನೆ/ ಹುದ್ದೆಗಳ ಮಂಜೂರಾತಿ ಆದೇಶವಾಗಿರುವುದಿಲ್ಲ.

ಸದರಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು 100 ಮಕ್ಕಳ ಸಂಖ್ಯೆಗನುಗುಣವಾಗಿ ಈ ಹಿಂದೆ ಮಂಜೂರಾಗಿರುವ 20 ಹುದ್ದೆಗಳೂ ಸೇರಿದಂತೆ 28 ವಿವಿಧ ವರ್ಗದ ಹುದ್ದೆಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಿ ಇದಕ್ಕೆ ತಗಲುವ ಅಂದಾಜು ಆಯವ್ಯಯ ವಿವರಗಳೊಂದಿಗೆ ದಿ:28.05.2019ರಂದು ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿತ್ತು.

ದಿನಾಂಕ:19.05.2020ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದರಿ ವರ್ಷದಲ್ಲಿ ಕೋವಿಡ್ -19 ಇದ್ದ ಕಾರಣ ಸದರಿ ಶಾಲೆಯಲ್ಲಿನ 100 ಮಕ್ಕಳ ಬದಲಿಗೆ 50 ಮಕ್ಕಳ ಶಾಲೆಯಾಗಿ ಪರಿವರ್ತಿಸಬಹುದಾಗಿದೆ. ಅದರಲ್ಲಿ 25 ಹೆಣ್ಣು ಮಕ್ಕಳಿಗೆ ವಸತಿಯುತ ವ್ಯವಸ್ಥೆ ಹಾಗೂ 25 ಮಕ್ಕಳಿಗೆ ಡೇ ಸ್ಕಾಲರ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಹಾಗೂ ಎಲ್ಲಾ 50 ಮಕ್ಕಳಿಗೆ ಮಧ್ಯಾಹ್ನದ ಊಟ ವ್ಯವಸ್ಥೆ ಮಾಡಲು ತಿಳಿಸಿರುತ್ತಾರೆ. ಆದರೆ ಈ ಬಗ್ಗೆ ಮಂಜೂರಾತಿ ಆದೇಶವಾಗಿರುವುದಿಲ್ಲ.

ದಿ:06.09.2021ರಂದು ಸದರಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು 100 ಮಕ್ಕಳ ಸಂಖ್ಯೆಗನುಗುಣವಾಗಿ ಈ ಹಿಂದೆ ಮಂಜೂರಾಗಿರುವ 20 ಹುದ್ದೆಗಳೂ ಸೇರಿದಂತೆ 28 ವಿವಿಧ ವರ್ಗದ ಹುದ್ದೆಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ತಗಲುವ ಅಂದಾಜು ಆಯವ್ಯಯ ವಿವರಗಳೊಂದಿಗೆ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿತ್ತು.

ದಿನಾಂಕ: 12.11.2021ರಲ್ಲಿ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು ಈ ಹಿಂದೆ ಮಂಜೂರಾಗಿರುವ ಹುದ್ದೆಗಳೊಂದಿಗೆ ಪ್ರಸ್ತುತ ಅವಶ್ಯವಿರುವ ಹುದ್ದೆಗಳ ಜೊತೆಗೆ ಆಯವ್ಯಯ/ಮೂಲಭೂತ ಸೌಲಭ್ಯಗಳೊಂದಿಗೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರನ್ನು ಕೋರಲಾಗಿತ್ತು.

ದಿನಾಂಕ:15.02.2023ರಂದು ಸದರಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು 100 ಮಕ್ಕಳ ಸಂಖ್ಯೆಗನುಗುಣವಾಗಿ ಈಗಾಗಲೇ ಮಂಜೂರಾತಿಯಾಗಿರುವ 20 ಹುದ್ದೆಗಳ ಜೊತೆಗೆ 12 ವಿವಿಧ ವರ್ಗದ (01 ಅಧೀಕ್ಷಕರು, 01 ಪ್ರದಸ, 02 ಗೃಹಪಾಲಕರು, 03 ರಕ್ಷಕರು, 02 ಅಡುಗೆಯವರು, 03 ಆಯಾ) ಹುದ್ದೆಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ತಗಲುವ ಅಂದಾಜು ಆಯವ್ಯಯ ವಿವರಗಳೊಂದಿಗೆ ಮರು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಹೆಚ್ಚುವರಿ ಮಾಹಿತಿಯನ್ನು ಒದಗಿಸುವಂತೆ ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರನ್ನು ಕೋರಲಾಗಿತ್ತು.

ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ದಿ:17.11.2023 ರಲ್ಲಿ ಸದರಿ ಮಾರ್ಪಾಡುಗೊಳ್ಳಲಿರುವ ವಸತಿ ಶಾಲೆಯನ್ನು ಪ್ರಾರಂಭಿಸಲು ಅಗತ್ಯ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಪ್ರಸ್ತುತ ಸದರಿ ಶಾಲೆಯಲ್ಲಿ 05 ವಿದ್ಯಾರ್ಥಿಗಳಿದ್ದು, 03 ಶಿಕ್ಷಕರು ಹಾಗೂ 02 ಶಿಕ್ಷಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಾಲೆಯ ಶಿಕ್ಷಕರು ಸರ್ವೇ ಮಾಡಿರುವ ಪ್ರಕಾರ ಈಗಾಗಲೇ 34 ವಿದ್ಯಾರ್ಥಿಗಳು ವಸತಿ ಶಾಲೆ ಪ್ರಾರಂಭಿಸಿದಲ್ಲಿ ದಾಖಲಾಗುವುದಾಗಿ ತಿಳಿಸುತ್ತಾ, ಹೆಚ್ಚುವರಿ ಮಾಹಿತಿಯೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಹಂಸಧ್ವನಿ ಕಿವುಡ ಮಕ್ಕಳ ಶಾಲೆಯನ್ನು ನಿಯಮಗಳನ್ನು ಪಾಲಿಸಿ ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು ಈಗಾಗಲೇ ಮಂಜೂರಾಗಿರುವ 20 ಹುದ್ದೆಗಳೊಂದಿಗೆ ವಿವಿಧ ವರ್ಗದ 12 ಹುದ್ದೆಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡುವ ಅವಶ್ಯಕತೆ ಇರುತ್ತದೆ. ಸದರಿ ಹುದ್ದೆಗಳಿಗೆ ಹಾಗೂ ಇತರೆ ಅವಶ್ಯಕ ಅಂದಾಜು ಆಯವ್ಯಯದ ವಿವರವನ್ನು ಒಳಗೊಂಡಂತೆ ಪರಿಷ್ಕೃತ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲಿಸಿ ಆರ್ಥಿಕ ಇಲಾಖೆಯಿಂದ ಹುದ್ದೆಗಳ ಮಂಜೂರಾತಿ ಹಾಗೂ ಖಾಲಿಯಿರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿಮಾಡಿದ ನಂತರ ಸದರಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು ಕ್ರಮವಹಿಸಲಾಗುತ್ತದೆ.

**ಸಂಖ್ಯೆ: ಮಮಇ 235 ಪಿಹೆಚ್‌ಪಿ 2023**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ ಸಚಿವರು.